ಸಮೀಪಕ್ಕೆ ತೆವಳುತ್ತಾ ಹೋಗಲು ಅವಕಾಶ ಸಿಗುತ್ತದೆ. ಹೀಗೆ ವಾಸನಾ ಗೊಂದಲ ಸೃಷ್ಟಿಸಿ ಚಿರತೆ, ಜಿಂಕೆಗಳ ಬೇಟೆಯಾಡುತ್ತದೆ. ಹೀಗೆ ವಾಸನೆಯನ್ನು ಬೇಟೆವಿದ್ಯೆಯಾಗಿ ಬಳಸುವ ಪರಿಯನ್ನು ಚಿರತೆಗೆ ಕಲಿಸಿಕೊಟ್ಟವರು ಯಾರು?

ಹುಲಿ, ಶಿಕಾರಿ ನಡೆಸಿದ ಒಂದೆರಡು ಗಂಟೆಯೊಳಗೇ ಈ ವಾಸನೆಯು ಭಾಷೆಯಾಗಿ ರೂಪಾಂತರವಾಗಿ ಮಾಂಸಾಹಾರಿ ಜೀವಿಗಳಿಗೆ ತಲುಪಿ ಹೋಗಿತ್ತು. ಸತ್ತ ಪ್ರಾಣಿಯ ಬಳಿಗೆ ಓಡೋಡಿ ಬಂದ ಅನೇಕರು ಹುಲಿಯನ್ನು ಅಲ್ಲಿ ಕಂಡು ತೆಪ್ಪಗೆ ಅಡಗಿ ಕೂತವು. ಇದ್ದುದ್ದರಲ್ಲಿ ಹೈನಾಗಳು, ನರಿಗಳು, ಕೆಲವೊಮ್ಮೆ ಕಾಡುನಾಯಿಗಳು ತಮ್ಮ ಪಾಲನ್ನು ಕದ್ದಾದರೂ ಕಬಳಿಸಲು ಹುಲಿಯ ಸಮೀಪಕ್ಕೆ ಹೋಗುವ ಭಂಡ ಧೈರ್ಯ ಮಾಡುತ್ತವೆ. ಈ ವಿಷಯದಲ್ಲಿ ಚಿರತೆಗಳು ತುಂಬಾ ಚಾಲಾಕಿಗಳು. ತಮ್ಮ ಸಮಯಕ್ಕಾಗಿ ಹೊಂಚು ಹಾಕಿ, ಸರ್ಪಗಾವಲು ಹಾಕಿ ಕೂತು ಬಿಡುತ್ತವೆ. ಕಾಡಿನ ವಾಸನೆ ಒಂದು ಭಾಷೆಯಾಗಿ ಕೆಲಸ ಮಾಡುವ ಈ ಪರಿಯೇ ನನ್ನಲ್ಲಿ ಅಚ್ಚರಿ ಹುಟ್ಟಿಸಿತು. ಹಕ್ಕಿಗಳಿಗೆ ವಾಸನೆ ಗ್ರಹಿಸುವ ಶಕ್ತಿಯೇ ಇಲ್ಲದಿರುವುದರಿಂದ ಇವು ನೋಟ ಮತ್ತು ಶಬ್ದದ ಭಾಷೆಯನ್ನೇ ಹೆಚ್ಚಾಗಿ ನಂಬಿಕೊಂಡಿವೆ. ಹಕ್ಕಿಗಳ ನೋಟಕ್ಕಿರುವಷ್ಟು ಸೂಕ್ಷ್ಮತೆ ಪ್ರಾಯಶಃ ಯಾರಿಗೂ ಇಲ್ಲವೇನೋ! ಪ್ರಾಣಿಗಳ ಮೈ ಮೇಲಿನ ಘಾಟುವಾಸನೆಯನ್ನು ಗಾಳಿ ಮೂಲಕ ಪತ್ತೆ ಮಾಡಬಲ್ಲ ನಾಯಿ ಮೂಗಿನ ಅನೇಕ ವಾಸನಾತಜ್ಞ ಗೆಳೆಯರನ್ನು ನಾನು ನೋಡಿದ್ದೇನೆ. ಇವರ ಪ್ರಕಾರ ಆನೆ ಮೈಗಿರುವ ವಾಸನೆ ಹುಲಿಗಿರುವುದಿಲ್ಲ. ಹುಲಿಯ ಮೈ ವಾಸನೆ ಚಿರತೆಗಿರುವುದಿಲ್ಲ. ಜಿಂಕೆ, ಕಡವೆಗಳ ಮೈ ವಾಸನೆಯೇ ಬೇರೆ ಎನ್ನುವ ಇವರು ಕರಡಿಯ ವಾಸನಾ ಶಕ್ತಿಯಂತೂ ಅತ್ಯದ್ಭುತ ಎನ್ನುತ್ತಾರೆ.

ಮರಗಳ ಸಿಪ್ಪೆ ಕೆರೆದು ಅಲ್ಲಿ ತನ್ನ ಮೂತ್ರ ವಿಸರ್ಜಿಸುವ ಹುಲಿ ಕೂಡ ಆ ಮೂಲಕ ತನ್ನ ಸಂದೇಶವನ್ನು ಇತರೆ ಹುಲಿಗಳಿಗೆ ತಲುಪಿಸುತ್ತದೆ. ಹುಲಿಯ ಸೂಸು ವಾಸನೆಯಲ್ಲಿ ಅನೇಕ ಸಂದೇಶಗಳ ಭಾಷೆ ಇದೆಯಂತೆ. ಒಂದು ಗಂಡು ಹುಲಿ ಮತ್ತೊಂದು ಗಂಡು ಹುಲಿಗೆ ಈ ಗಡಿ ದಾಟಿ ನೀನೂ ಬರಬೇಡ, ನಾನೂ ಬರಲ್ಲ ಎಂಬ ಎಚ್ಚರಿಕೆಯನ್ನು ಮೂತ್ರದ ವಾಸನೆ ಮೂಲಕ ಕೊಡುವುದಂತೆ. ಹೆಣ್ಣುಹುಲಿ ನಾನು ಗರ್ಭಿಣಿಯಾಗಲು ಸಿದ್ಧಳಿದ್ದೇನೆ. ಆಸಕ್ತ ಗಂಡುಗಳು ನನ್ನ ಸಂಪರ್ಕಿಸಲು ಬರಬಹುದು ಎಂಬ ಪ್ರೇಮ ನಿವೇದನೆಯನ್ನು ಕೂಡ ಸೂಸು ಮುಖಾಂತರ ರವಾನಿಸುತ್ತಾಳಂತೆ. ಒಂದು ಮಾಮೂಲಿ ಉಚ್ಚೆಯಲ್ಲೇ ಇಷ್ಟೊಂದು ಬಗೆಯ ಭಾಷಾ ಸಂವಹನಗಳು ನಡೆಯುತ್ತಿರುವುದು ಅದ್ಭುತ ಎನಿಸುವುದಿಲ್ಲವೇ? ಗಂಡುಹುಲಿ ಹೆಚ್ಚು ವಾಸನೆಯ ಕಕ್ಕವನ್ನು ಒಂದೇ ಕಡೆ ರಾಶಿಯಾಗಿ ಹಾಕಿ, ನಾನು ಇಷ್ಟೊಂದು ಮಲವಿಸರ್ಜನೆ ಮಾಡುವಷ್ಟು ಪ್ರಬಲನಾಗಿದ್ದೇನೆ. ನನ್ನ ತಂಟೆಗೆ ಬಂದರೆ ಹುಷಾರ್ ಎಂಬ ಸಂದೇಶವನ್ನು ಮತ್ತೊಂದು ಗಂಡು ಹುಲಿಗೆ ನೀಡುತ್ತದೆಯಂತೆ. ಅಂದರೆ ಕಾಡಿನಲ್ಲಿ ಎಷ್ಟೊಂದು ತರಹದ ಭಾಷೆಗಳು ಹೇಗೆಲ್ಲಾ ಬಳಕೆಯಾಗುತ್ತಿವೆ! ಅಬ್ಬಬ್ಬ ಆಲೋಚಿಸಿಯೇ ತಲೆ ಗಿರ್ ಎನ್ನುತ್ತಿದೆ.

ಇನ್ನೂ ಗಂಡು ಚಮರೀಮೃಗದ ಕಸ್ತೂರಿ ವಾಸನೆಯೂ ಕೂಡ ಒಂದು ಪ್ರೇಮ ನಿವೇದನೆಯ ನುಡಿಯೇ ಆಗಿದೆ. ಹೆಣ್ಣು ಕಾಳಿಂಗ ಸರ್ಪ ಕೂಡ ತನ್ನ ಮೈ ಮೂಲಕ ವಿಶೇಷ ವಾಸನೆಯನ್ನು ಗಾಳಿಯಲ್ಲಿ ತೇಲಿ ಬಿಟ್ಟು ಗಂಡು ಉರಗಗಳಿಗೆ ಸ್ವಯಂವರಕ್ಕೆ ಬರುವಂತೆ ಆಹ್ವಾನಿಸುತ್ತಾಳೆ. ನಾವು ಜುಜುಬಿ ಎಂದು ಭಾವಿಸುವ ವಾಸನೆಯನ್ನೇ ಪ್ರಾಣಿಗಳು ಹೇಗೆ ತಮ್ಮ ವ್ಯವಹಾರದ ಭಾಷೆ ಮಾಡಿಕೊಂಡಿವೆ ನೋಡಿ.

ಕೊನೆಯದು ಕಾಡಿನಲ್ಲಿ ಸಿಗುವ ನೋಟದ ಸಾಧ್ಯತೆ. ಶಬ್ದ, ವಾಸನೆಯಷ್ಟು ನೋಟ ಕಾಡಿನಲ್ಲಿ ಪ್ರಬಲ ಸಾಧನವಲ್ಲ. ಹುಲಿ, ಚಿರತೆಗಳ ನೋಟ ತೀಕ್ಷ್ಣವಾದರೂ ಗಿಡಮರ, ಪೊದೆಗಳು ಅಡ್ಡ ಬರುವುದರಿಂದ ವೀಕ್ಷಣೆ ಅಷ್ಟು ಸಲೀಸಲ್ಲ. ಆಮೇಲೆ ಒಂದೊಂದು ಪ್ರಾಣಿಗೂ ಕಾಣಿಸುವ ಬಣ್ಣ, ಕಾಣಬಲ್ಲ ದೂರದಲ್ಲಿ ಸಾಕಷ್ಟು ವ್ಯತ್ಯಾಸಗಳಿವೆ. ಕರಡಿಗೆ ಯಾವುದೇ ಪ್ರಾಣಿ ಹದಿನೈದು ಅಡಿ ದೂರಕ್ಕೆ ಬಂದರೇನೆ ಕಾಣುವುದು. ದೂರದ ದೃಷ್ಟಿ ಇದಕ್ಕೆ ಇಲ್ಲವೇ ಇಲ್ಲ. ಹೀಗಾಗಿ ಹುಲಿಯೋ, ಆನೆಯೋ, ಸದ್ದಿಲ್ಲದೆ ಸಮೀಪಕ್ಕೆ ಬಂದಾಗ ಕರಡಿ ಹೆದರಿ ಕಂಗಾಲಾಗುತ್ತದೆ. ದಿಢೀರೆಂದು ತನ್ನೆರಡು ಮುಂಗಾಲುಗಳ ಬಳಸಿ ಗೂಟದಂತೆ ಎದ್ದು ನಿಂತು ಕೂಗಾಡುತ್ತದೆ. ಸದಾ ಕತ್ತು ಬಗ್ಗಿಸಿಕೊಂಡೇ